# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಜಿ.ಎಸ್) ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ:-

**ಪ್ರಶ್ನೆ:**

ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು ಪಬ್ಲಿಕ್ ಶಾಲೆಯಲ್ಲಿ ಕೊಠಡಿ ಚಾವಣಿಯು ಸಿಮೆಂಟ್ ಮಂಗಳವಾರ ಕಳಚಿ ಬಿದ್ದಿದೆ. ತರಗತಿಯಲ್ಲಿದ್ದ ಎಲ್ಲಾ 40 ವಿದ್ಯಾರ್ಥಿಗಳು ಕೂಡಲೇ ಜಾಗೃತರಾಗಿ ಓಡಿ ಅಪಾಯದಿಂದ ಪಾರಾಗಿದ್ದಾರೆ.

ಬೆಳಗ್ಗೆ ತರಗತಿ ನಡೆಯುವಾಗ ಏಕಾಏಕಿ ಚಾವಣಿಯ ಸಿಮೆಂಟ್ ಭಾಗಶ: ಕಿತ್ತು ಬಂದಿದೆ. ಹಿಂದೆಯೇ ಸಿಮೆಂಟ್ ಗಾರೆಯು ಕುಸಿದು ಬಿದ್ದಿದೆ. ಗಾಬರಿಗೊಂಡ ಮಕ್ಕಳನ್ನು ಶಿಕ್ಷಕರು ಸಮಾಧಾನ ಪಡಿಸಿ ಅಲ್ಲಿನ ಮಕ್ಕಳನ್ನು ಪ್ರಾಣಪಾಯದಿಂದ ಶಿಕ್ಷಕರು ಪಾರು ಮಾಡಿದರು. ಶಾಲೆಯ ಕಟ್ಟಡ ನಿರ್ಮಾಣವಾಗಿ 15 ರಿಂದ 16 ವರ್ಷ ಕಳೆದಿದೆ. ಕಟ್ಟಡ ತೀರ ಹಳೆಯದಲ್ಲ. ಗುಣಮಟ್ಟ ಇಲ್ಲದ ಕಾಮಗಾರಿಯೆಂದು ಅಲ್ಲಿನ ಶಿಕ್ಷಕರು ದೂರು ನೀಡಿರುತ್ತಾರೆ. 06 ಕೊಠಡಿಗಳಲ್ಲಿ ಅಲ್ಲಲ್ಲಿ ಬಿರುಕು ಬಿಟ್ಟಿವೆ. ಎಲ್.ಕೆ.ಜಿ ತರಗತಿಯಿಂದ 7ನೇ ತರಗತಿವರೆಗೆ ಒಟ್ಟಾರೆ 137 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುತ್ತಾರೆ.

ನಿರ್ಮಾಣವಾಗಿರುವ ಛಾವಣಿಯ ಸಿಮೆಂಟ್ ಪದರ ಯಾವಾಗ ಬೀಳುವುದು ಎಂಬ ಆತಂಕದಲ್ಲಿ ವಿದ್ಯಾರ್ಥಿಗಳು ತರಗತಿಯಲ್ಲಿ ಇರುವಂತಾಗಿದೆ. ಇದನ್ನು ಮಾನ್ಯ ಶಾಲಾ ಶಿಕ್ಷಣ ಇಲಾಖೆ ಸಚಿವರಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಉತ್ತರ:**

ಚಿಕ್ಕಬಳ್ಳಾಪುರ ಜಿಲ್ಲೆಯ ಚೇಳೂರು ಪಬ್ಲಿಕ್ ಶಾಲೆಯಲ್ಲಿ, ಈಗಾಗಲೇ ಕೊಠಡಿ ದುರಸ್ಥಿ ಕಾಮಗಾರಿಗಳಿಗಾಗಿ 2022-23ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಪರಿಷ್ಕೃತ ಕ್ರಿಯಾ ಯೋಜನೆಯಂತೆ ಸರ್ಕಾರದ ಆದೇಶ ಸಂಖ್ಯೆ: ಇಪಿ 256 ಯೋಸಕ 2022 ಬೆಂಗಳೂರು ದಿನಾಂಕ:13.03.2024 ರನ್ವಯ ರೂ.10.00 ಲಕ್ಷಗಳ ಅನುದಾನವನ್ನು PRED ಇಲಾಖೆಗೆ ಬಿಡುಗಡೆ ಮಾಡಲಾಗಿದ್ದು, ಈ ಅನುದಾನದಲ್ಲಿ ಸದರಿ ಶಾಲೆಯ 08 ಕೊಠಡಿಗಳನ್ನು ದುರಸ್ಥಿ ಕಾಮಗಾರಿಗಾಗಿ ಪರಿಗಣಿಸಲಾಗಿದ್ದು, ಅದರಲ್ಲಿ ಚಾವಣಿಯ Cement Plastering ಉದುರಿರುವ ಕೊಠಡಿಯು ಸಹ ಸೇರಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಪ್ರಸ್ತುತ ಛಾವಣಿ Cement Plastering ಉದುರಿರುವ ಕೊಠಡಿಯನ್ನು PRED ಇಲಾಖೆಯವರು ಸ್ಥಳ ಪರಿಶೀಲನೆ ನಡೆಸಿದ್ದು, ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

**ಇಪಿ 33 ಎಂಪಿಇ 2025**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಸಚಿವರು**